# ಕರ್ನಾಟಕ ಲೋಕಾಯುಕ್ತ

ಸಂ.ಕಂಪ್ಲೇಂಟ್/ಉಪಲೋಕ್/ಎಂವೈಎಸ್/605/2018/ಎಆರ್ಇ-20

ಬಹುಮಹಡಿಗಳ ಕಟ್ಟಡ
ಡಾ:ಅಂಬೇಡ್ಕರ್ ವೀಧಿ
ಬೆಂಗಳೂರು-560 001
ದಿನಾಂಕ 20-7-2023

## *ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12 (3) ರಡಿ ವರದಿ*

ವಿಷಯು: ಈ ಪ್ರಕರಣದ (1) **ಶ್ರೀ ಜಯರಾಮಯ್ಯ, ಸಹಾಯಕ ಕಾರ್ಯಪಾಲಕ ಇಂಜಿನಿಯರ್,** ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.3 ಉಪವಿಭಾಗ, ಪಾಂಡವಪುರ, ಮಂಡ್ಯ ಜಿಲ್ಲೆ (ಪ್ರಸ್ತುತ ನಿವೃತ್ತ) ಅವರ ವಿರುದ್ಧ ಸಲ್ಲಿಸಿದ ದೂರಿನಲ್ಲಿ **(2) ಶ್ರೀ ತಮ್ಮೇಗೌಡ ಬಿ., ಸಹಾಯಕ ಕಾರ್ಯಪಾಲಕ ಇಂಜಿನಿಯರ್,** ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.3 ಉಪವಿಭಾಗ, ಪಾಂಡವಪುರ, ಮಂಡ್ಯ ಜಿಲ್ಲೆ (ಪ್ರಸ್ತುತ ನಿವೃತ್ತ) **(3) ಶ್ರೀ ಉಮೇಶ ಬಿ.ಆರ್., ಸಹಾಯಕ ಕಾರ್ಯಪಾಲಕ ಇಂಜಿನಿಯರ್,** ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.3 ಉಪವಿಭಾಗ, ಪಾಂಡವಪುರ, ಮಂಡ್ಯ ಜಿಲ್ಲೆ ಮತ್ತು ಪ್ರಸ್ತುತ ಉಪಕಾರ್ಯದರ್ಶಿ, (ಎಂ.ಎಂ.ಐ), ಜಲಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು **(4) ಶ್ರೀ ವಿಶ್ವನಾಥ ಎಂ., ಸಹಾಯಕ ಕಾರ್ಯಪಾಲಕ ಇಂಜಿನಿಯರ್,** ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.3 ಉಪವಿಭಾಗ, ಪಾಂಡವಪುರ, ಮಂಡ್ಯ ಜಿಲ್ಲೆ ಇವರುಗಳ ದುರ್ನಡತೆ/ಕರ್ತವ್ಯ ಲೋಪದ ಕುರಿತು.

****

ಶ್ರೀ ಕೆ.ಎನ್. ತುಳಸಿರಾಮ ಬಿನ್ ನಾರಾಯಣ, ಹಿರೋಡೆ ಬೀದಿ, ಪಾಂಡವಪುರ, ಮಂಡ್ಯ ಜಿಲ್ಲೆ **(ಇನ್ನು ಮುಂದೆ "ಫಿರ್ಯಾದಿದಾರರು" ಎಂದು ಕರೆಯಲ್ಪಡುತ್ತಾರೆ)** ಇವರು ಪ್ರಪತ್ರ 1 ಮತ್ತು 2 ರಂತೆ ಸರ್ಕಾರಿ/ಸಾರ್ವಜನಿಕ ಅಧಿಕಾರಿ/ನೌಕರರಾದ ಮತ್ತು ಎದುರುದಾರರಾದ (1) **ಶ್ರೀ ಜಯರಾಮಯ್ಯ, ಸಹಾಯಕ ಕಾರ್ಯಪಾಲಕ ಇಂಜಿನಿಯರ್,** ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.3 ಉಪವಿಭಾಗ, ಪಾಂಡವಪುರ, ಮಂಡ್ಯ ಜಿಲ್ಲೆ (ಪ್ರಸ್ತುತ ನಿವೃತ್ತ) ಅವರ ವಿರುದ್ಧ ಸಲ್ಲಿಸಿದ

ದೂರಿನಲ್ಲಿ, (2) **ಶ್ರೀ ತಮ್ಮೇಗೌಡ ಬಿ., ಸಹಾಯಕ ಕಾರ್ಯಪಾಲಕ ಇಂಜಿನಿಯರ್**, ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.3 ಉಪವಿಭಾಗ, ಪಾಂಡವಪುರ, ಮಂಡ್ಯ ಜಿಲ್ಲೆ (ಪ್ರಸ್ತುತ ನಿವೃತ್ತ), (3) **ಶ್ರೀ ಉಮೇಶ ಬಿ.ಆರ್., ಸಹಾಯಕ ಕಾರ್ಯಪಾಲಕ ಇಂಜಿನಿಯರ್**, ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.3 ಉಪವಿಭಾಗ, ಪಾಂಡವಪುರ, ಮಂಡ್ಯ ಜಿಲ್ಲೆ ಮತ್ತು ಪ್ರಸ್ತುತ ಉಪಕಾರ್ಯದರ್ಶಿ, (ಎಂ.ಎಂ.ಐ), ಜಲಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು (4) **ಶ್ರೀ ವಿಶ್ವನಾಥ ಎಂ., ಸಹಾಯಕ ಕಾರ್ಯಪಾಲಕ ಇಂಜಿನಿಯರ್**, ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.3 ಉಪವಿಭಾಗ, ಪಾಂಡವಪುರ, ಮಂಡ್ಯ ಜಿಲ್ಲೆ **(ಇನ್ನು ಮುಂದೆ "ಎದುರುದಾರರ-1, 2, 3 ಮತ್ತು 4" ಎಂದು ಅನುಕ್ರಮವಾಗಿ ಕರೆಯಲ್ಪಡುತ್ತಾರೆ)**, ರವರನ್ನು ಸೇರ್ಪಡೆಗೊಳಿಸಿ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 9 ರಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2) **ಪ್ರಕರಣದ ಸಂಕ್ಷಿಪ್ತ ಸಾರಾಂಶ ಮತ್ತು ಕೋರಿರುವ ಪರಿಹಾರ;**

ಈ ಪ್ರಕರಣವನ್ನು ಎದುರುದಾರರ ವಿರುದ್ಧ ಅಕ್ರಮ ಒತ್ತುವರಿ ತೆರವುಗೊಳಿಸಲು ಯಾವುದೇ ಕ್ರಮ ಕೈಗೊಳ್ಳದೇ ಇರುವ ಕುರಿತು ಆರೋಪಿಸಿ ದಾಖಲಿಸಲಾಗಿದೆ; ಸರ್ಕಾರದ ವತಿಯಿಂದ ವಾಸಕ್ಕಾಗಿ ಎದುರುದಾರರಿಗೆ ಅಧಿಕೃತ ವಸತಿ ಗೃಹ ನೀಡಿದ್ದು ಅದರ ಒಂದು ಭಾಗವನ್ನು (ಖಾಲಿ ಜಾಗೆಯನ್ನು) ಅಂದರೆ ಸುಮಾರು 10 ಗುಂಟೆ ಹೆಚ್ಚಿನ ಜಾಗವನ್ನು ಬಿಜಿಎಸ್ ಶಿಕ್ಷಣ ಸಂಸ್ಥೆಯವರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಬೆಲೆ ಬಾಳುವ ಸರ್ಕಾರಿ ಆಸ್ತಿಯನ್ನು ಲಘಟಾಯಿಸಿದ ಬಗ್ಗೆ ಎದುರುದಾರರಿಗೆ ಮತ್ತು ತಹಶೀಲ್ದಾರರಿಗೆ ತಕರಾರು ಸಲ್ಲಿಸಿ ಅಕ್ರಮ ಒತ್ತುವರಿಯನ್ನು ತೆರವುಗೊಳಿಸಲು ಕೋರಿಕೊಂಡಿದ್ದರೂ ಸಹ ಕ್ರಮ ಕೈಗೊಳ್ಳದೇ ಇರುವ ಆರೋಪ ಮಾಡಲಾಗಿದೆ.

3) **1ನೇ ಎದುರುದಾರರ ಆಕ್ಷೇಪಣೆಗಳು;**

1ನೇ ಎದುರುದಾರರು ತಮ್ಮ ದಿನಾಂಕ 27-9-2022 ರ ಆಕ್ಷೇಪಣೆಗಳಲ್ಲಿ ಮೇಲಿನ ಆರೋಪಗಳನ್ನು ಅಲ್ಲಗಳೆದು ಫಿರ್ಯಾದಿದಾರರು ಸಲ್ಲಿಸಿದ ಫಿರ್ಯಾದಿ ಕ್ಷುಲಕ, ಕಿರುಕುಳಕಾರಿ, ಚೇಷ್ಟಾಕಾರಕ, ದುರುದ್ದೇಶಪೂರಿತವಾಗಿದೆ ಎಂದು ಹೇಳುತ್ತಾರೆ; ಮುಂದುವರೆದು ಸದರಿ ಆರೋಪಗಳನ್ನು ಫಿರ್ಯಾದಿದಾರರು ದಿನಾಂಕ 27-5-2011 ರಂದು ಈಗಾಗಲೇ ಸಾರ್ವಜನಿಕ ಅರ್ಜಿ ಮೂಲಕ 'ನಾಗರೀಕ ಸಮಿತಿ ಪಾವಗಡ' ಹೆಸರಿನಲ್ಲಿ ಮಾಡಲಾಗಿದ್ದು ಅದಕ್ಕೆ ಕಾರಣ ಬಿಜಿಎಸ್ ಶಿಕ್ಷಣ ಸಂಸ್ಥೆಯವರು ಫಿರ್ಯಾದಿಯ ಮಗನಿಗೆ ಡೋನೆಷನ್ ಇಲ್ಲದೇ ಸೀಟು ನೀಡಲು ನಿರಾಕರಿಸಿರುವುದು; ಸದರಿ ಫಿರ್ಯಾದು ಕಲಂ 8 ಲೋಕಾಯುಕ್ತ ಕಾಯ್ದೆ ಅಡಿ ಊರ್ಜಿತವಾಗಿರುವುದಿಲ್ಲ; 1ನೇ ಎದುರುದಾರರು ದಿನಾಂಕ 17-5-2018 ರಿಂದ 15-12-2020 ರವರೆಗೆ ಎ.ಇ.ಇ. ಆಗಿ ಪಾಂಡವಪುರದ ಸಂಬಂಧಿತ ಕಛೇರಿಯಲ್ಲಿ ಕೆಲಸ ನಿರ್ವಹಿಸಿ ದಿನಾಂಕ 31-1-2022 ರಂದು ವಯೋನಿವೃತ್ತಿ ಹೊಂದಿರುತ್ತಾರೆ; 1ನೇ ಎದುರುದಾರರು ತಮ್ಮ ಕರ್ತವ್ಯದ ಅವಧಿಯಲ್ಲಿ ದಿನಾಂಕ 13-6-2018 ರಂದು ಲೋಕಾಯುಕ್ತ ಸಂಸ್ಥೆಯ ದಿನಾಂಕ 2-5-2018 ರ ಪತ್ರವನ್ನು ಸ್ವೀಕರಿಸಿ ಅದನ್ನು ಕ್ರಮ ವಹಿಸಲು ಹಾಗೂ ವರದಿ ಸಲ್ಲಿಸಲು ಚಂದ್ರಶೇಖರ, ಕಿರಿಯ ಅಭಿಯಂತರರಿಗೆ ಅದೇ ದಿನ ಒಪ್ಪಿಸಿದ್ದಾರೆ; ದಿನಾಂಕ 25-6-2018 ರಂದು ಮತ್ತು ದಿನಾಂಕ 6-2-2019 ರಂದು ಈ ಸಂಸ್ಥೆಗೆ ಉತ್ತರ ಬರೆದು ದಾಖಲಾತಿಗಳನ್ನು ಸಲ್ಲಿಸಿರುವುದಾಗಿ ತಿಳಿಸುತ್ತಾರೆ; ಫಿರ್ಯಾದು ತಿರಸ್ಕರಿಸಲು ಯೋಗ್ಯವಾಗಿದೆ ಎಂದು ಹೇಳುತ್ತಾರೆ; ಮುಂದುವರೆದು ಫಿರ್ಯಾದಿದಾರರ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 20 ಅಡಿ ಸುಳ್ಳು ಫಿರ್ಯಾದು ನೀಡಿದ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಂಡಿದ್ದಾರೆ; ಮುಂದುವರೆದು ತಾನು ತುರ್ತು ನೀರು ನಿರ್ವಹಣಾ ಚಟುವಟಿಕೆಯನ್ನು ನಿರ್ವಹಿಸಬೇಕಾಗಿದ್ದು ಅದಲ್ಲದೇ ಕೋವಿಡ್-19 ರ ಆರೈಕೆಗಾಗಿ ಮತ್ತು ತಾನು ದಿನಾಂಕ 15-12-2020 ರಂದು ವರ್ಗಾವಣೆ ಆಗಿದ್ದು ಹಾಗೂ ವಿಶ್ವನಾಥ ರವರು

ತನ್ನ ಗೈರುಹಾಜರಾತಿಯಲ್ಲಿ ತಮ್ಮ ಪ್ರಭಾರ ಹೊಂದಿದ್ದರಿಂದ ಈ ಕುರಿತು ಕ್ರಮ ಕೈಗೊಳ್ಳಲು ಆಗದೇ ಇರುವುದಾಗಿ ತಿಳಿಸಿದ್ದಾರೆ.

4) **2ನೇ ಎದುರುದಾರರ ಆಕ್ಷೇಪಣೆಗಳು;**

2ನೇ ಎದುರುದಾರರು ತಮ್ಮ ದಿನಾಂಕ 14-10-2022 ರ ಆಕ್ಷೇಪಣೆಗಳಲ್ಲಿ ತಾನು ದಿನಾಂಕ 1-2-2018 ರಿಂದ 17-5-2018 ರ ವರೆಗೆ ಶ್ರೀ ಜಯರಾಮ ರವರ ಬದಲಿಗೆ ಪ್ರಭಾಗ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುವುದಾಗಿ, ಮುಂದುವರೆದು ದಿನಾಂಕ 17-3-2018 ರಿಂದ ದಿನಾಂಕ 31-5-2018 ರ ಅವಧಿಯಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದು ಈ ವಿಷಯದ ಬಗ್ಗೆ ತನಗೆ ಯಾವುದೇ ಮಾಹಿತಿ ಇಲ್ಲವಾಗಿದ್ದು ಈ ಕುರಿತು ಯಾವುದೇ ಪತ್ರ ವ್ಯವಹಾರ ಕೂಡ ತಮ್ಮ ಅವಧಿಯಲ್ಲಿ ನಡೆದಿರಲಿಲ್ಲ ಎಂದು ಹೇಳುತ್ತಾರೆ; ಅದಲ್ಲದೇ ಸದರಿ ವ್ಯವಹಾರದ ಬಗ್ಗೆ ತನಗೆ ಮಾಹಿತಿ ಇಲ್ಲವಾಗಿರುವುದರಿಂದ ಹಾಗೂ ಯಾವುದೇ ಪತ್ರ ವ್ಯವಹಾರ ನಡೆಯದೇ ಇದ್ದುದ್ದರಿಂದ ವಿವಾದಿತ ವಿಷಯ ತನ್ನ ಗಮನಕ್ಕೆ ಬಾರದೇ ಇದ್ದುದ್ದರಿಂದ ತಾನು ಈ ಕುರಿತು ಕ್ರಮ ಕೈಗೊಳ್ಳಲು ಸಾಧ್ಯವಾಗಿಲ್ಲ ಎಂದು ಹೇಳುತ್ತಾರೆ; ಮುಂದುವರೆದು ಸದರಿ ದೂರನ್ನು ದಿನಾಂಕ 13-6-2018 ರಂದು ಅಂದರೆ ತಾನು ದಿನಾಂಕ 17-5-2018 ರಂದು ತನ್ನ ಪ್ರಭಾರವನ್ನು ಜಯರಾಮಯ್ಯ ರವರಿಗೆ ವಹಿಸಿಕೊಟ್ಟ ನಂತರ ತಮ್ಮ ಕಛೇರಿಯಲ್ಲಿ ಸ್ವೀಕರಿಸಲಾಗಿದ್ದು ಇದು ವಿವಾದಿತ ವಿಷಯದ ಬಗ್ಗೆ ತನಗೆ ಯಾವುದೇ ಮಾಹಿತಿ ಇರಲಿಲ್ಲ ಎನ್ನುವುದನ್ನು ತೋರಿಸುತ್ತದೆ ಎಂದು ಹೇಳುತ್ತಾರೆ.

5) **3ನೇ ಎದುರುದಾರರ ಆಕ್ಷೇಪಣೆಗಳು;**

3ನೇ ಎದುರುದಾರರು ತಮ್ಮ ದಿನಾಂಕ 3-10-2022 ರ ಆಕ್ಷೇಪಣೆಗಳಲ್ಲಿ ತಾನು ದಿನಾಂಕ 6-7-2015 ರಿಂದ ದಿನಾಂಕ 1-2-2018 ರವರೆಗೆ ಪಾಂಡವಪುರ ಕಛೇರಿಯ ಕರ್ತವ್ಯ ಹೊಂದಿದ್ದು ತನ್ನ ಅವಧಿಯಲ್ಲಿ ವಿವಾದಿತ ವಿಷಯದ ಕುರಿತು ಯಾವುದೇ ಪತ್ರ ವ್ಯವಹಾರ ನಡೆದಿರಲಿಲ್ಲವಾಗಿ ಈ ಬಗ್ಗೆ ತನಗೆ ಮಾಹಿತಿ

ಇರಲಿಲ್ಲವಾಗಿ; ಅದಲ್ಲದೇ ಸದರಿ ವ್ಯವಹಾರದ ಬಗ್ಗೆ ತನಗೆ ಮಾಹಿತಿ ಇಲ್ಲವಾಗಿರುವುದರಿಂದ ಹಾಗೂ ಯಾವುದೇ ಪತ್ರ ವ್ಯವಹಾರ ನಡೆಯದೇ ಇದ್ದುದ್ದರಿಂದ ವಿವಾದಿತ ವಿಷಯ ತನ್ನ ಗಮನಕ್ಕೆ ಬಾರದೇ ಇದ್ದುದ್ದರಿಂದ ತಾನು ಈ ಕುರಿತು ಕ್ರಮ ಕೈಗೊಳ್ಳಲು ಸಾಧ್ಯವಾಗಿಲ್ಲ ಎಂದು ಹೇಳುತ್ತಾರೆ; ಮುಂದುವರೆದು ಸದರಿ ದೂರನ್ನು ದಿನಾಂಕ 13-6-2018 ರಂದು ಅಂದರೆ ತಾನು ದಿನಾಂಕ 1-2-2018 ರಂದು ತನ್ನ ವರ್ಗಾವಣೆಯಾದ ನಂತರ ತಮ್ಮ ಕಛೇರಿಯಲ್ಲಿ ಸ್ವೀಕರಿಸಲಾಗಿದ್ದು ಇದು ವಿವಾದಿತ ವಿಷಯದ ಬಗ್ಗೆ ತನಗೆ ಯಾವುದೇ ಮಾಹಿತಿ ಇರಲಿಲ್ಲ ಎನ್ನುವುದನ್ನು ತೋರಿಸುತ್ತದೆ ಎಂದು ಹೇಳುತ್ತಾರೆ; 2ನೇ ಎದುರುದಾರರಂತೆ 3ನೇ ಎದುರುದಾರರು ಸಹ ಸಂಕ್ಷಿಪ್ತವಾಗಿ ವಿವಾದಿತ ವಿಷಯ ತನ್ನ ಅವಧಿಯಲ್ಲಿ ತನ್ನ ಗಮನಕ್ಕೆ ಬಾರದೇ ಅಥವಾ ತರಲಾರದೇ ಇದ್ದು ಸದರಿ ವಿಷಯದ ಬಗ್ಗೆ ಯಾವುದೇ ಪತ್ರ ವ್ಯವಹಾರ ನಡೆಯದೇ ಇದ್ದು ಅಲ್ಲದೇ ದೂರುದಾರರು ಈ ವಿಷಯದ ಕುರಿತು ತನ್ನನ್ನು ಸದರಿ ಅವಧಿಯಲ್ಲಿ ಯಾವತ್ತೂ ಸಂಪರ್ಕಿಸದೇ ಇದ್ದು ಹೀಗಾಗಿ ತಾನು ಈ ಕುರಿತು ಕ್ರಮ ಕೈಗೊಳ್ಳಲಾಗಲಿಲ್ಲ ಎಂದು ಹೇಳುತ್ತಾರೆ.

6) **4ನೇ ಎದುರುದಾರರ ಆಕ್ಷೇಪಣೆಗಳು;**

4ನೇ ಎದುರುದಾರರು ತಮ್ಮ ದಿನಾಂಕ 8-3-2023 ರ ಆಕ್ಷೇಪಣೆಗಳಲ್ಲಿ ಪಾಂಡವಪುರ ತಾಲ್ಲೂಕು ತಹಶೀಲ್ದಾರರಿಗೆ ವಿವಾದಿತ ಜಾಗೆಯ ಸರ್ವೆ ಮಾಡಿ ಹದ್ದುಬಸ್ತು ಗುರುತಿಸಲು ಅಲ್ಲದೇ ಮುಖ್ಯಾಧಿಕಾರಿ, ಪುರಸಭೆ, ಪಾಂಡವಪುರ ರವರಿಗೆ ಚಕ್‌ಬಂದಿ, ಖಾತಾ ನಕಲು ಹಾಗೂ ಲೈಸನ್ಸ್ ಪ್ರತಿಗಳ ದಾಖಲೆಗಳನ್ನು ನೀಡಲು ಕೇಳಿಕೊಂಡಿದ್ದು ಅಲ್ಲದೇ ಸಂಬಂಧಿತ ಬಿ.ಜಿ.ಎಸ್. ಶಾಲೆಯವರಿಗೆ ಸದರಿಯವರು ಅಕ್ರಮಿಸಿದ ಅಳತೆಯ ದಾಖಲೆಗಳನ್ನು ನೀಡಲು ಕೇಳಿಕೊಂಡಿದ್ದು ಸದರಿಯವರು ಯಾವುದೇ ದಾಖಲೆಗಳನ್ನು ನೀಡದೇ ಇರುವುದರಿಂದ ದಿನಾಂಕ 4-4-2022 ರಂದು ಒತ್ತವರಿ ತೆರವು ಕಾರ್ಯ ಕೈಗೊಳ್ಳಲು ದಿನ ನಿಗಧಿಪಡಿಸಿದ್ದು ಆ ದಿನದಂದು ತಹಶೀಲ್ದಾರರಾಗಲೀ ಪುರಸಭೆ ಮುಖ್ಯಾಧಿಕಾರಿಗಳಾಗಲೀ ಹಾಗೂ ಭೂ ದಾಖಲೆಗಳ ಸಹಾಯಕ ನಿರ್ದೇಶಕರಾಗಲೀ ಸ್ಥಳಕ್ಕೆ ಬರದೇ ಇದ್ದುದ್ದರಿಂದ ಸರ್ವೆ ಕಾರ್ಯ

ಕೈಗೊಳ್ಳಲು ಸಾಧ್ಯವಾಗಿಲ್ಲ ಎಂದು ಹೇಳುತ್ತಾರೆ; ಸದರಿ ದಿನದಂದು ಪತ್ರಿಕಾ ಮಾಧ್ಯಮದವರು ಹಾಜರಿದ್ದು ಛಾಯಾಚಿತ್ರ ಮತ್ತು ವಿಡಿಯೋಗಳನ್ನು ಮಾಡಿಕೊಂಡಿರುವುದಾಗಿ ಹೇಳುತ್ತಾರೆ; ಮುಂದುವರೆದು ಪ್ರಸ್ತುತ ಅರಣ್ಯ ಇಲಾಖೆಯವರು ಸ್ಥಳ ಗುರುತಿಸದೇ ಸರ್ವೆ ಕಾರ್ಯ ಮಾಡುತ್ತಿರುವುದನ್ನು ಆಕ್ಷೇಪಿಸಿರುವುದನ್ನು ಹಾಗೂ ಸದರಿ ಜಾಗ ಯಾವ ಇಲಾಖೆಗೆ ಸೇರಿದೆ ಎಂಬುದನ್ನು ಗುರುತಿಸಿಕೊಳ್ಳದೇ ಸರ್ವೆ ಮಾಡಲು ಬರುವುದಿಲ್ಲ ಎಂದು ತಿಳಿಸಿರುವುದಾಗಿ ಹೇಳುತ್ತಾರೆ.

7) ಫಿರ್ಯಾದಿದಾರರ ಆರೋಪ, ಎದುರುದಾರರ ಆಕ್ಷೇಪಣೆ ಮತ್ತು ಎರಡು ಬದಿಯ ದಾಖಲಾತಿಗಳನ್ನು ಪರಿಶೀಲಿಸಲಾಯಿತು.

- ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ ಒಪ್ಪಿಕೊಂಡಂತೆ ಸರ್ಕಾರಿ ವಸತಿ ಗೃಹದ ಒಂದು ಭಾಗ ಖಾಲಿ ಜಾಗವನ್ನು ಬಿ.ಜಿ.ಎಸ್. ಶಿಕ್ಷಣ ಸಂಸ್ಥೆಯವರು ಅಕ್ರಮವಾಗಿ ಒತ್ತುವರಿ ಮಾಡಲಾಗಿದೆ; ಹೀಗಾಗಿ ಒತ್ತುವರಿ ಮಾಡಿದ ಜಾಗೆಯ ಅಳತೆ, ಉದ್ದಗಲ ಎಷ್ಟು ಎನ್ನುವುದು ಈ ಸಂದರ್ಭದಲ್ಲಿ ಮುಖ್ಯವಾಗಿರುವುದಿಲ್ಲ; ಮುಖ್ಯವಾದುದು ಏನೆಂದರೆ ಸರ್ಕಾರಿ ಜಾಗೆಯನ್ನು ಬಿ.ಜಿ.ಎಸ್. ಶಿಕ್ಷಣ ಸಂಸ್ಥೆಯವರು ಅತಿಕ್ರಮಣ ಮಾಡಿರುವುದು ಹಾಗೂ ಅದನ್ನು ತೆರವುಗೊಳಿಸಲು ಎದುರುದಾರರಾದ ಸಂಬಂಧಪಟ್ಟ ಅಧಿಕಾರಿಗಳು ಏನು ಕ್ರಮ ಕೈಗೊಂಡಿದ್ದಾರೆ ಎನ್ನುವುದು; ಅಕ್ರಮ ಒತ್ತುವರಿಯನ್ನು ಎದುರುದಾರರು ಒಪ್ಪಿಕೊಂಡಿರುವುದರಿಂದ ಅದರ ಅಳತೆ ಈ ಹಂತದಲ್ಲಿ ಮುಖ್ಯವಾಗಿರುವುದಿಲ್ಲ; ಏಕೆಂದರೆ ಈವರೆಗೆ ಒತ್ತುವರಿಯನ್ನು ತೆರವುಗೊಳಿಸಿರುವುದಿಲ್ಲ ಎಂಬುದು ಎಲ್ಲಾ ಎದುರುದಾರರ ನಿಲುವು ಆಗಿರುತ್ತದೆ; ಹೀಗಿರುವಾಗ ಒತ್ತುವರಿ ಮಾಡಿರುವ ಕ್ಷೇತ್ರ ಅಥವಾ ಅಳತೆ ಎಷ್ಟು ಎಂಬುದನ್ನು ಅನುಪಾಲನಾ

ಸಂದರ್ಭದಲ್ಲಿ ಗುರುತಿಸಿ ಅದನ್ನು ಈ ಸಂಸ್ಥೆಗೆ ವರದಿ ಮಾಡಬಹುದಿತ್ತು.

- ದಿನಾಂಕ 25-6-2018 ರ ಪತ್ರದಲ್ಲಿ ಎದುರುದಾರರು ತಮ್ಮ ಕಛೇರಿಯ ವತಿಯಿಂದ ಒತ್ತುವರಿಯನ್ನು ಸ್ವಯಂಪ್ರೇರಿತವಾಗಿ ತೆರವುಗೊಳಿಸಲು ಸಂಬಂಧಪಟ್ಟ ಬಿ.ಜಿ.ಎಸ್. ಸಂಸ್ಥೆಗೆ ಸೂಚನೆ ನೀಡಿದ್ದು ಅದರಂತೆ ಸಂಸ್ಥೆಯ ಪ್ರಾಂಶುಪಾಲರು ಮೌಖಿಕವಾಗಿ ಕಾಲಾವಕಾಶ ಕೋರಿದ್ದು ಪ್ರಸ್ತುತ ಇಲಾಖೆ ವತಿಯಿಂದ ಸದರಿ ಜಾಗೆಯಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಉದ್ದೇಶ ಇಲ್ಲವಾಗಿದ್ದು ಆ ಕಾರಣಕ್ಕೆ ಪ್ರಾಂಶುಪಾಲರಿಗೆ ಕಾಲಾವಕಾಶ ನೀಡಲಾಗಿದೆ ಎಂದು ನಮೂದಿಸಿದ್ದಾರೆ; ಈ ಅಂಶದ ಆಧಾರದಲ್ಲಿ ಲೋಕಾಯುಕ್ತ ಸಂಸ್ಥೆಯವರು ಎದುರುದಾರರಿಂದ ಒತ್ತುವರಿ ತೆರವುಗೊಳಿಸಿದ ಪ್ರಗತಿ ವರದಿ ಸಲ್ಲಿಸಲು ಕೇಳಿದ್ದರು; ಈ ಅಂಶ ಕೂಡ ಸದರಿ ಸಂಸ್ಥೆಯವರು ಒತ್ತುವರಿ ಮಾಡಿರುವುದನ್ನು ತೋರಿಸುತ್ತದೆ; ತದನಂತರ ಈ ಸಂಸ್ಥೆಯಿಂದ ಎಷ್ಟೇ ಸೂಚನೆಗಳನ್ನು ನೀಡಿದರು, ಪತ್ರ ವ್ಯವಹಾರವನ್ನು ಮಾಡಿದರು ಹಾಗೂ ನಿರ್ದೇಶನ ನೀಡಿದರೂ ಸಹ ಒತ್ತುವರಿ ತೆರವುಗೊಳಿಸುವ ಕುರಿತು ಎದುರುದಾರರು ನೀಡಿದ ಸಮಜಾಯಿಷಿಗಳು ಅಥವಾ ಉತ್ತರಗಳು ಸಮರ್ಪಕವಾಗಿಲ್ಲದೇ ಇರುವುದು ಕಂಡುಬರುತ್ತದೆ;
- ಒತ್ತುವರಿ ಸ್ಥಳದಲ್ಲಿ ಸದರಿ ಶಿಕ್ಷಣ ಸಂಸ್ಥೆಯವರು ಸೈಕಲ್ ನಿಲ್ದಾಣ ಮತ್ತು ಶೌಚಾಲಯವನ್ನು ನಿರ್ಮಿಸಿಕೊಂಡಿರುವುದರ ಬಗ್ಗೆ ದಾಖಲೆ ತೋರಿಸುತ್ತದೆ.
- ಸದರಿ ಒತ್ತುವರಿ ಸ್ಥಳದ ಪಕ್ಕದಲ್ಲಿಯೇ ಸದರಿ ಶಿಕ್ಷಣ ಸಂಸ್ಥೆಯ ಕಟ್ಟಡಗಳು ಇರುವುದರ ಬಗ್ಗೆ ಕೂಡ ದಾಖಲೆಗಳು ಕಂಡುಬರುತ್ತದೆ.

- ಸದರಿ ಸಂಸ್ಥೆಗೆ ಸೇರಿದ ಗ್ರಾಮ ಸೇವಾ ವಿದ್ಯಾರ್ಥಿ ನಿಲಯವನ್ನು ವಿಸ್ತರಿಸಲು ರಿಯಾಯಿತಿ ದರದಲ್ಲಿ ಸರ್ವೆ ನಂ.685/471 ರ ಸರ್ಕಾರಿ ವಸತಿ ಗೃಹ ಮತ್ತು ಖಾಲಿ ನಿವೇಶನಗಳನ್ನು ತಮ್ಮ ಸಂಸ್ಥೆಗೆ ವಹಿಸಿಕೊಡಲು ಸದರಿ ಸಂಸ್ಥೆಯವರು ಸರ್ಕಾರಕ್ಕೆ ಪತ್ರ ಬರೆದಿರುವುದು ಕಂಡುಬರುತ್ತದೆ; ಸದರಿ ಪತ್ರಕ್ಕೆ ಸರ್ಕಾರದ ಕಾರ್ಯದರ್ಶಿ ಮಟ್ಟದಲ್ಲಿ ಹಾಗೂ ಎದುರುದಾರರ ಮಟ್ಟದಲ್ಲಿ ಪತ್ರ ವ್ಯವಹಾರಗಳಾಗಿರುವುದು ಕಂಡುಬರುತ್ತದೆ; ಅದರ ಫಲಿತಾಂಶದಂತೆ ಖಾಲಿ ಜಾಗದಲ್ಲಿ ವಸತಿ ಗೃಹದ ಸೋಕಪಿಟ್‌ಗಳು ಇರುವುದರಿಂದ ಸದರಿ ಖಾಲಿ ಜಾಗೆಯನ್ನು ಇಲಾಖೆಯ ವಶದಲ್ಲಿಯೇ ಇಟ್ಟುಕೊಳ್ಳಲು ವರದಿ ಮಾಡಿರುವುದು ಕಂಡುಬರುತ್ತದೆ; ಮತ್ತೆ ಮುಂದುವರೆದು ಎದುರುದಾರರು ಹಾಗೂ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ವಿವಾದಿತ ಜಾಗೆಯ ಕುರಿತು ಪತ್ರ ವ್ಯವಹಾರಗಳಾಗಿರುವುದು ಕಂಡುಬರುತ್ತದೆ; ಈ ಅಂಶಗಳನ್ನು ಪರಿಶೀಲಿಸಿದಾಗ ಸದರಿ ಸಂಸ್ಥೆಯವರು ಅದಾಗಲೇ ಖಾಲಿ ಜಾಗೆಯನ್ನು ಅತಿಕ್ರಮಣ ಮಾಡಿರುವುದು ಹಾಗೂ ಸದರಿ ಅತಿಕ್ರಮಣ ಎದುರುದಾರರ ತಿಳುವಳಿಕೆ/ಮಾಹಿತಿಯಲ್ಲಿ ಇರುವುದು ಕಂಡುಬರುತ್ತದೆ.
- ವಸತಿ ಗೃಹಕ್ಕೆ ಹೊಂದಿಕೊಂಡು ಸದರಿ ಸಂಸ್ಥೆಯವರು ಅನಧಿಕೃತ ಕಾಂಪೌಂಡ ನಿರ್ಮಾಣ ಮಾಡಿರುವುದರ ಬಗ್ಗೆಯೂ ಸಹ ಇಲಾಖೆಯ ಗಮನದಲ್ಲಿರುವುದು; ಈ ಕುರಿತು ಸದರಿ ಅತಿಕ್ರಮಣದ ಬಗ್ಗೆ ಸಂಸ್ಥೆಯ ಪ್ರಾಂಶುಪಾಲರ ಜೊತೆ ಇಲಾಖಾ ವತಿಯಿಂದ ಪತ್ರ ವ್ಯವಹಾರ ಮಾಡಿರುವುದು ಕಂಡುಬರುತ್ತದೆ; ಅನಧಿಕೃತವಾಗಿ ನಿರ್ಮಿಸಿರುವ ಕಾಂಪೌಂಡ ತೆರವುಗೊಳಿಸಲು ಸದರಿ ಶಿಕ್ಷಣ ಸಂಸ್ಥೆಗೆ ನೋಟಿಸ್ ನೀಡಿರುವುದು ಉಲ್ಲೇಖವಾಗಿದೆ; ಸದರಿ ಅತಿಕ್ರಮಣ ಸಂಬಂಧಪಟ್ಟ ಇಲಾಖೆಯವರ ಗಮನದಲ್ಲಿದ್ದು ವಸತಿ ಗೃಹಗಳ

ಕಾಂಪೌಂಡ ಮೇಲೆ ಕಾಂಪೌಂಡ ಎತ್ತರಿಸಿ ಜಾಗವನ್ನು ಅತಿಕ್ರಮಣ ಮಾಡಿರುವುದಾಗಿ ಹಾಗೂ ಅನಧಿಕೃತ ಕಾಮಗಾರಿಯನ್ನು ತಕ್ಷಣ ನಿಲ್ಲಿಸಲು ಸೂಚಿಸಿರುವುದು ಕೂಡ ಕಂಡುಬರುತ್ತದೆ; ಸದರಿ ಅತಿಕ್ರಮಣಕ್ಕೆ ಮುಂಚೆ ಇಲಾಖೆಯ ಸಂಬಂದಪಟ್ಟ ಮೇಲಾಧಿಕಾರಿಗಳಂದಾಗಲೀ, ಜಿಲ್ಲಾಧಿಕಾರಿ ಗಳಂದಾಗಲೀ ಅನುಮತಿ ಪಡೆದ ಬಗ್ಗೆ ಯಾವುದೇ ದಾಖಲೆ ಸದರಿ ಸಂಸ್ಥೆಯವರ ಬಳಿ ಇಲ್ಲದಿರುವುದು ಕಂಡುಬರುತ್ತದೆ; ಹೀಗಾಗಿ ಸದರಿ ಕೃತ್ಯವನ್ನು ಅಕ್ರಮ ಒತ್ತುವರಿ ಕೃತ್ಯ ಎಂದು ಎದುರುದಾರರೇ ವರ್ಣಿಸಿರುವುದು ಕಂಡುಬರುತ್ತದೆ.

- ಸದರಿ ಅತಿಕ್ರಮಣದ ಬಗ್ಗೆ ಸಾರ್ವಜನಿಕ ದೂರುಗಳು ಮತ್ತು ಆಕ್ಷೇಪಣೆಗಳು ಕೂಡ ಸಲ್ಲಿಕೆಯಾಗಿರುವುದು ಕಂಡುಬರುತ್ತದೆ.
- ಸದರಿ ಅತಿಕ್ರಮಣವನ್ನು ತೆರವುಗೊಳಿಸಲು ಈ ಸಂಸ್ಥೆಯಿಂದ ನೀಡಿದ ಸೂಚನಾ ಮತ್ತು ನಿರ್ದೇಶನಾ ಪತ್ರಗಳ ಬಗ್ಗೆ 4ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿಯೇ ನಮೂದಿಸಿದ್ದಾರೆ; ಸದರಿ ಸೂಚನಾ ಪತ್ರಗಳ ಬಗ್ಗೆ 4ನೇ ಎದುರುದಾರರ ಆಕ್ಷೇಪಣೆಯಲ್ಲಿ ಕ್ರಮಾಂಕ: 2, 6, 10, 13, 20, 29, 39 ರ ಉಲ್ಲೇಖಿತ ಸೂಚನಾ ಪತ್ರಗಳೆಂದು ತೋರಿಸಲಾಗಿದೆ.
- ಸದರಿ ಸೂಚನೆಗೆ ಅನುಗುಣವಾಗಿ ಎದುರುದಾರರು ಸಲ್ಲಿಸಿದ ಉತ್ತರಗಳನ್ನು ಗಮನಿಸಿದಾಗ ಎದುರುದಾರರು ಮೊದಲು ಸದರಿ ಜಾಗೆಯನ್ನು ತಮ್ಮ ಇಲಾಖೆಗೆ ಸೇರಿದ್ದು ಎಂದು ಹಕ್ಕು ಸಾಧಿಸಿ ನಂತರ ಸದರಿ ಜಾಗೆ ಸರ್ವೆ ಮಾಡಲು ತಹಶೀಲ್ದಾರರು ಹಾಗೂ ಕಂದಾಯ ಅಧಿಕಾರಿಗಳು ಸಹಕಾರ ನೀಡದೇ ಇರುವ ಕಾರಣ ತೋರಿಸಿರುತ್ತಾರೆ; ಮುಂದುವರೆದು ಸದರಿ ಸರ್ವೆ ಮಾಡಲು ಅರಣ್ಯ ಇಲಾಖೆಯವರು ಆಕ್ಷೇಪಣೆ ಮಾಡುತ್ತಿರುವುದಾಗಿ ಹೊಸ ಅಂಶವನ್ನು

ಈ ಫಿರ್ಯಾದಿ ದಾಖಲಾದ ಸುಮಾರು 4 ವರ್ಷಗಳ ನಂತರ ಆಕ್ಷೇಪಣೆ ರೂಪದಲ್ಲಿ ಎತ್ತಿರುತ್ತಾರೆ; ಮತ್ತೆ ಮುಂದುವರೆದು ಸದರಿ ಶಿಕ್ಷಣ ಸಂಸ್ಥೆಯವರು ಸದರಿ ಜಾಗ ತಮಗೆ ಗ್ರಾಮ ಸೇವಾ ಸಮಿತಿಯವರು ನೀಡಿದ ಜಾಗವಾಗಿದೆ ಎಂದು ಹಕ್ಕು ಸಾಧಿಸುತ್ತಿರುವುದಾಗಿ ಹೊಸ ಅಂಶವನ್ನು ತಮ್ಮ ಆಕ್ಷೇಪಣೆಯಲ್ಲಿ ಎತ್ತಿರುತ್ತಾರೆ; ಈ ಅಂಶಗಳನ್ನು ಪರಿಗಣಿಸಿದಾಗ ಕೇವಲ ಪತ್ರ ವ್ಯವಹಾರದಲ್ಲಿಯೇ ಕಾಲಹರಣ ಮಾಡಿ ಎದುರುದಾರರು ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ ಮಾಡಿರುವುದು ಬಹುಸ್ಪಷ್ಟವಾಗಿ ಕಂಡುಬರುತ್ತದೆ; ಜಾಗ ಅತಿಕ್ರಮಣ ಮಾಡುತ್ತಿರುವಾಗ ಅಥವಾ ಮಾಡಿದ ನಂತರ ಅದನ್ನು ತೆರವುಗೊಳಿಸಲು ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಇದರಲ್ಲಿ ಎದುರುದಾರರ ನಿರ್ಲಕ್ಷ ಅಡಿಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

- ಒಂದು ಸರ್ಕಾರಿ ಜಾಗೆಯನ್ನು ಒತ್ತುವರಿದಾರರು ಅತಿಕ್ರಮಣ ಮಾಡಿ ಕಟ್ಟುವ ಹಂತಕ್ಕೆ ಹೋಗಿ ಪೂರ್ಣ ಜಾಗೆಯನ್ನು ಅತಿಕ್ರಮಿಸುವವರೆಗೆ ಸದರಿ ಕೃತ್ಯದ ಅರಿವಿದ್ದರೂ ಸಹ ಸದರಿ ಜಾಗೆಯ ಅತಿಕ್ರಮಣಕ್ಕೆ ಖಾಸಗಿಯವರಿಗೆ ಸುಮಾರು ವರ್ಷಗಳವರೆಗೆ ಸಹಕಾರ ನೀಡಿರುವುದು ಎದುರುದಾರರ ಕೃತ್ಯದಿಂದ ದೃಢಪಡುತ್ತದೆ.
- ಸರ್ಕಾರಿ ಇಲಾಖೆಯ ಪ್ರತಿನಿಧಿಗಳಾಗಿ ಸದರಿ ಸಂಸ್ಥೆಯವರನ್ನೇ ಅತಿಕ್ರಮಣ ಮಾಡಿದ ಕ್ಷೇತ್ರದ ಬಗ್ಗೆ ಅಳತೆ ಮತ್ತು ವಿವರ ಸಲ್ಲಿಸಲು ಕೇಳಿರುವುದು ಎದುರುದಾರರು ಮಾಡಿದ ಮತ್ತೊಂದು ವಿಪರ್ಯಾಸದಂತೆ ಕಂಡುಬರುತ್ತದೆ; ಈ ಸಂಸ್ಥೆಯಿಂದ ಒತ್ತುವರಿ ತೆರವುಗೊಳಿಸಲು ಸೂಚನೆ ಹೋದಾಗಲೆಲ್ಲಾ ಇಲ್ಲಸಲ್ಲದ ನೆಪ ತೋರಿಸಿ ಎದುರುದಾರರು ಕಾಲಹರಣ ಮಾಡಿರುವುದು ಸ್ಪಷ್ಟವಾಗಿ ಕಡತ ಪರಿಶೀಲಿಸಿದಾಗ ಕಂಡುಬರುತ್ತದೆ; ಸದರಿ ಶಿಕ್ಷಣ

ಸಂಸ್ಥೆಯವರಿಗೆ ಅಕ್ರಮವಾಗಿ ಪಡೆದುಕೊಂಡ ಜಾಗದಲ್ಲಿ ಮುಂದುವರೆಯಲು ಎದುರುದಾರರೇ ಅವಕಾಶ ಮಾಡಿಕೊಟ್ಟಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ; ನೆಪಕ್ಕೆ ಮಾತ್ರ ಈ ಸಂಸ್ಥೆಗೆ ಇಲ್ಲಸಲ್ಲದ ಅಂಶಗಳನ್ನು ಮುಂದಿಟ್ಟು ಈ ಪ್ರಕರಣವನ್ನು ಎಳೆದುಕೊಂಡು ಹೋಗಿರುವುದು ಎದುರುದಾರರ ಕೃತ್ಯದಿಂದ ಸ್ಪಷ್ಟವಾಗುತ್ತದೆ.

- ಅತಿಕ್ರಮಣ ತೆರವುಗೊಳಿಸಲು ಎದುರುದಾರರು ಈ ಸಂಸ್ಥೆಯ ಜೊತೆ ಮಾಡಿದ ಪತ್ರ ವ್ಯವಹಾರಗಳು ಕರ್ತವ್ಯ ನಿರ್ವಹಣೆಯಿಂದ ನುಣಿಚಿಕೊಳ್ಳುವುದಾಗಿರುತ್ತದೆ ಮತ್ತು ಸರ್ಕಾರದ ಅಥವಾ ಇಲಾಖೆಗೆ ಸೇರಿದ ಸ್ವತ್ತನ್ನು ಸಂರಕ್ಷಿಸಲು ಎದುರುದಾರರು ವಿಫಲರಾದಂತೆ ಕಂಡುಬರುತ್ತದೆ ಎಂಬ ಅಂಶವನ್ನು ಈಗಾಗಲೇ ಮೇಲ್ಕಂಡ ಪತ್ರ ವ್ಯವಹಾರಗಳಿಂದ ಕಂಡುಬರುತ್ತಿದ್ದರೂ ಸಹ ಕೇವಲ ಪತ್ರಗಳ ಮೂಲಕವೇ ಕ್ರಮ ಕೈಗೊಳ್ಳಲಾಗಿದೆ ಎಂದು ಎದುರುದಾರರು ಪ್ರದರ್ಶನಾತ್ಮಕವಾಗಿ ಸಂಸ್ಥೆಯ ಜೊತೆ ನಡೆದುಕೊಂಡಿರುವುದು ಸ್ಪಷ್ಟವಾಗಿದೆ; ಫಿರ್ಯಾದಿಯನ್ನು ದಾಖಲಿಸಿದ ದಿನದಿಂದ ಇಂದಿನವರೆಗೆ ಅಕ್ರಮ ಒತ್ತುವರಿ ತೆರವುಗೊಳಿಸಲು ಎದುರುದಾರರು ಸೂಕ್ತ ಕ್ರಮ ಕೈಗೊಂಡಿಲ್ಲ ಎನ್ನುವುದು ಮೇಲ್ನೋಟಕ್ಕೆ ಕಂಡುಬರುತ್ತದೆ; ಅದೇ ಕಾರಣಕ್ಕಾಗಿ ಸದರಿ ಎಲ್ಲಾ ಎದುರುದಾರರನ್ನು ಈ ಪ್ರಕರಣದಲ್ಲಿ ಸೇರ್ಪಡೆಗೊಳಿಸಿ ಸದರಿಯವರಿಗೆ ಅಂತಿಮ ನೋಟಿಸ್ ನೀಡಿ ಒತ್ತುವರಿ ತೆರವುಗೊಳಿಸಿದ ಬಗ್ಗೆ ವರದಿ ಸಲ್ಲಿಸಲು ತಿಳಿಸಿದರೂ ಸಹ ಎದುರುದಾರರು ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಕಂಡುಬರುತ್ತದೆ; ಅದಾದ ನಂತರ ಎಲ್ಲಾ ಎದುರುದಾರರಿಂದ ಆಕ್ಷೇಪಣೆಗಳನ್ನು ಸಲ್ಲಿಸಲು ಕೇಳಲಾಗಿದ್ದು ಸದರಿಯವರು

ಮೇಲ್ಕಾಣಿಸಿದಂತೆ ಆಕ್ಷೇಪಣೆಗಳನ್ನು ಸಲ್ಲಿಸಿದ್ದು ಸದರಿ ಆಕ್ಷೇಪಣೆಗಳಲ್ಲಿ ನಂಬಲರ್ಹವಾದ ಅಥವಾ ಅಂಗೀಕರಿಸಬಹುದಾದ ಯಾವುದೇ ಅಂಶಗಳು ಕಂಡುಬರುತ್ತಿಲ್ಲ.

೮) ಮೇಲಿನ ಅಂಶಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ವಸತಿ ಗೃಹದ ಒಂದು ಖಾಲಿ ಜಾಗವನ್ನು ಬಿ.ಜಿ.ಎಸ್. ಶಿಕ್ಷಣ ಸಂಸ್ಥೆಯವರು ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಸರ್ಕಾರಿ ಆಸ್ತಿಯ ಅಕ್ರಮ ಒತ್ತುವರಿಗೆ ಎದುರುದಾರರು ಸಹಕಾರ ನೀಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ; ಅದಲ್ಲದೇ ಸದರಿ ಶಿಕ್ಷಣ ಸಂಸ್ಥೆಯವರು ಸರ್ಕಾರಿ ಜಾಗೆಯನ್ನು ತಮ್ಮದೆಂದು ಹಕ್ಕು ಸಾಧಿಸುತ್ತಿರುವುದು ಹಾಗೂ ಆ ಕುರಿತು ಎದುರುದಾರರು ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಕೂಡ ಸೂಕ್ಷ್ಮವಾಗಿ ಕಂಡುಬಂದ ಅಂಶವಾಗಿದೆ.

೯) ಮೇಲಿನ ಎಲ್ಲಾ ಕಾರಣಗಳಿಂದ 1 ರಿಂದ 4ನೇ ಎದುರುದಾರರು ಸರ್ಕಾರಿ/ಸಾರ್ವಜನಿಕ ಸೇವಕರಾಗಿದ್ದು, ತಮ್ಮ ಕರ್ತವ್ಯ ಪಾಲನೆಯಲ್ಲಿ ಪರಿಪೂರ್ಣ ಕರ್ತವ್ಯನಿಷ್ಠೆಯನ್ನು ತೋರಿಸದೆ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, ೧೯೬೬ರ, ನಿಯಮ ೩(1)(i) ರಿಂದ (iii) (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 2021) ರಲ್ಲಿ ಹೇಳಿದಂತೆ ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದಿರುತ್ತದೆ.

10) 1ನೇ ಎದುರುದಾರರಾದ **ಶ್ರೀ ಜಯರಾಮಯ್ಯ,** ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.೩, ಉಪವಿಭಾಗ, ಪಾಂಡವಪುರ, ಮಂಡ್ಯ (ಪ್ರಸ್ತುತ ನಿವೃತ್ತ) **(ನಿವೃತ್ತಿ ದಿನಾಂಕ 31-1-2022)** ಮತ್ತು

2ನೇ ಎದುರುದಾರರಾದ **ಶ್ರೀ ತಮ್ಮೇಗೌಡ ಬಿ.**, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.3, ಉಪವಿಭಾಗ, ಪಾಂಡವಪುರ (ಪ್ರಸ್ತುತ ನಿವೃತ್ತ) **(ನಿವೃತ್ತಿ ದಿನಾಂಕ 30-9-2021)** ರವರು ಸರ್ಕಾರಿ ಕರ್ತವ್ಯದಿಂದ ವಯೋನಿವೃತ್ತಿ ಹೊಂದಿರುತ್ತಾರೆ. ಕಾರಣ ಸದರಿ ನಿವೃತ್ತ ಅಧಿಕಾರಿಗಳ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, 1966ರ, ನಿಯಮ 3(1)(i) ರಿಂದ (iii) ಸಹ ನಿಯಮ 214(2)(ಬಿ)(ii) ಅಳವಡಿಸಿಕೊಂಡು ಮತ್ತು 3ನೇ ಎದುರುದಾರರಾದ **ಶ್ರೀ ಉಮೇಶ ಬಿ.ಆರ್.**, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.3, ಉಪವಿಭಾಗ, ಪಾಂಡವಪುರ (ನಿವೃತ್ತಿ ದಿನಾಂಕ: 31-7-2041) ಪ್ರಸ್ತುತ ಉಪಕಾರ್ಯದರ್ಶಿ, (ಎಂ.ಎಂ.ಐ), ಜಲಸಂಪನ್ಮೂಲ ಇಲಾಖೆ, ವಿಕಾಸ ಸೌಧ, ಬೆಂಗಳೂರು ಹಾಗೂ 4ನೇ ಎದುರುದಾರರಾದ **ಶ್ರೀ ವಿಶ್ವನಾಥ ಎಂ.**, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಕಾವೇರಿ ನೀರಾವರಿ ನಿಗಮ ನಿಯಮಿತ, ನಂ.3, ಉಪವಿಭಾಗ, ಪಾಂಡವಪುರ (ನಿವೃತ್ತಿ ದಿನಾಂಕ 30-6-2034) ಇವರುಗಳು ದುರ್ವರ್ತನೆಯಿಂದ ವರ್ತಿಸಿ ಶಿಸ್ತು ಕ್ರಮಕ್ಕೆ ಬಾಧ್ಯರಾಗಿದ್ದಾರೆಂದು ಕಂಡುಬಂದದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಈ ಮೂಲಕ 1 ರಿಂದ 4ನೇ ಎದುರುದಾರರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು **ಉಪಲೋಕಾಯುಕ್ತರು-2** ರವರಿಗೆ ಒಪ್ಪಿಸುವಂತೆ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

11) ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984 ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ಈ ವರದಿಯ ಮೇಲೆ ಕೈಗೊಂಡ ಅಥವಾ ಕೈಗೊಳ್ಳಲು

ಉದ್ದೇಶಿಸಿರುವ ಕ್ರಮವನ್ನು ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳ** ಅವಧಿಯೊಳಗೆ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

20/7/23

**(ನ್ಯಾಯಮೂರ್ತಿ ಕೆ.ಎನ್. ಫಣೀಂದ್ರ)**
**ಉಪಲೋಕಾಯುಕ್ತರು**
**ಕರ್ನಾಟಕ ರಾಜ್ಯ**